ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Tuesday, 5th December, 1972, Margasira 14,1894 S. E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS AND ANSWERS

(Starred Question's to which Oral Answers were given)

Visit of Health Department Officers To U. S. A.

9. Sri S. BANGARAPPA (Sorab).—

Will the Minister for Health be pleased to state :—

(*a*) whether it is a fact that the Secretary of the Health Department and the Director of Health Services visited U. S. A. ; if so, the purpose of their visit ;

(*b*) the amount spent on their visit ?

Sri H. SIDDAVEERAPPA (Minister for Health).—

(*a*) Yes. To participate along with the representatives of the Government of India in the negotiations with the International Development Association in connection with the finalisation of the agreements relating to Family Planning Project in five Districts of Bangalore Division.

(*b*)

	Rs.
Air fare, D. A. etc., on both the officers.	12,843-47
	2,140-00
	14,983-47
Contingencies	979-03
Total	15,962-50

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಬೆಂಗಳೂರು ವಿಭಾಗದ 5 ಜಿಲ್ಲೆಗಳಲ್ಲಿ ಕುಟುಂಬಯೋಜನೆ ಗಳಿಗೆ ಸಂಬಂಧಪಟ್ಟಂತೆ ಒಪ್ಪಂದಗಳನ್ನು ಅಂತಿಮಗೊಳಿಸುವ ಬಗ್ಗೆ ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯೊಡನೆ ಸಮಾಲೋಚನೆ ನಡೆಸಲು ಭಾರತ ಸರ್ಕಾರದ ಪ್ರತಿನಿಧಿಗಳೊಡನೆ ಭಾಗವಹಿಸಿದ್ದರು ಎಂದು ಉತ್ತರ ಕೊಟ್ಟಿದ್ದೀರಿ ಈ 5 ಜಿಲ್ಲೆಗಳಿಗೆ ಎಷ್ಟು ಹಣ ಸಹಾಯ ಇತ್ಯಾದಿ ಸೌಲಭ್ಯಗಳು ಈ ಒಪ್ಪಂದದಿಂದ ಸಿಕ್ಕಿದೆ ?

†ಶ್ರೀ ಎಚ್. ಸಿದ್ದವೀರಪ್ಪ. ಆ ಒಪ್ಪಂದದ ಪ್ರಕಾರ 5 ಜಿಲ್ಲೆಗಳಿಗೂ ವರ್ಲ್ಡ್ ಬ್ಯಾಂಕಿನಿಂದ 7 ಕೋಟಿ 34 ಲಕ್ಷ ರೂಪಾಯಿಗಳನ್ನು ನಾಮಿನಲ್ ಇಂಟರೆಸ್ಟ್ ಮೇಲೆ ಸಾಲ ಕೊಡುತ್ತಾರೆ. ಸ್ವೀಡನ್‌ನಿಂದ 3 ಕೋಟಿ 67 ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಡುತ್ತಾರೆ.

ಶ್ರೀ ಎಸ್ ಬಂಗಾರಪ್ಪ.—ಈ ಯೋಜನೆ 5 ಜಿಲ್ಲೆಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದರೆ ಅದು ಯಾವ ರೀತಿಯ ಯೋಜನೆ ?

SRI H. SIDDAVEERAPPA.—Actually, it is not a new project at all. There is already infrastructure for family planning work. The object is to see that the family planning work is intensified in the five districts of Banga'ore, Tumkur, Chitradurga, Shimoga and another in Bangalore Revenue Division; Bangalore City, is also taken as a district and included in it. The object is to see that family planning measures already on hand are made more effective.

ಶ್ರೀ ಟಿ. ಎಂ. ಮಂಜುನಾಥ್.—ಈ ಯೋಜನೆ 5 ಜಿಲ್ಲೆಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಹೇಳಿದ್ದೀರಿ, ಈ ಯೋಜನೆಯನ್ನು ಪ್ರತಿಯೊಂದು ಜಿಲ್ಲೆಗೂ ಸರಿಸಮಾನಾಗಿ ಹಾಕಿದ್ದೀರಾ ಅಥವಾ ವ್ಯತ್ಯಾಸ ಮಾಡಿ ಡಾಕ್ಟರುಗಳ ಸಂಖ್ಯೆಯನ್ನು ಏರುಪೇರು ಮಾಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಯೋಜನೆಯೇನು ಹೊಸದಲ್ಲ. ಸರಿಯಾದ ರೀತಿಯಿಂದ ಮೊದಲಿಂದಲೂ ಈ ಯೋಜನೆ ನಡೆಯುತ್ತಾ ಇತ್ತು. ಇದು ನಿಮ್ಮ ಪಕ್ಷದವರು ಅಧಿಕಾರದಲ್ಲಿ ದ್ದಾಗ ಜಾರುಪಾದದ್ದು. ಆದ್ದರಿಂದ ನೀವು ಧೈರ್ಯವಾಗಿರಬಹುದು.

ಶ್ರೀ ಎಂ. ಬಿ. ರಾಮಸ್ವಾಮಿ.—ಆರೋಗ್ಯ ಇರಾಖೆಯ ಅಧಿಕಾರಿಗಳು ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ಕೊಟ್ಟಿದ್ದಕ್ಕಾಗಿ 15,912 ರೂಪಾಯಿಗಳು ಖರ್ಚಾಗಿದೆ ಎಂದು ತಿಳಿಸಿದ್ದೀರಿ ಅವರು ವಿದೇಶದಿಂದ ಬಂದ ಮೇಲೆ ನಮ್ಮ ಅಧಿಕಾರಿಗಳ ಬಗ್ಗೆ ಏನಾದರೂ ಹೆಚ್ಚಿನ ರೀತಿಯಲ್ಲಿ ಪ್ರಚಾರ ಇತ್ಯಾದಿಗಳನ್ನು ಮಾಡಿ ಹೆಚ್ಚಿನ ಅನುಭವ ಆಗುವ ಹಾಗೆ ಮಾಡಿ ಸಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದಕ್ಕೋಸ್ಕರ ಅವರು ಅಲ್ಲಿಗೆ ಹೋಗಿರಲಿಲ್ಲ.

ಶ್ರೀ ಎಂ ಬಿ. ರಾಮಸ್ವಾಮಿ.—ಹಾಗಾದರೆ ಅವರು ವಿದೇಶಕ್ಕೆ ಹೋಗಿ ದುಡ್ಡು ಖರ್ಚು ಮಾಡಿದ್ದಕ್ಕಾಗಿ ಬಂದ ಪ್ರತಿಫಲ ಏನು ?

ಶ್ರೀ ಎಚ್. ಸಿದ್ದವೀರಪ್ಪ.—11 ಕೋಟಿ ಚಿಲ್ಲರೆ ರೂಪಾಯಿಗಳ ಹಣವನ್ನು ತರುವ ಅಗ್ರಿಮೆಂಟ್ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಸ್ವೀಡನ್‌ನಿಂದ 3 ಕೋಟಿ ರೂಪಾಯಿ ಸಹಾಯ ಧನ ಸಿಕ್ಕಿದೆ ಎಂದು ತಾವು ಹೇಳಿದಿರಿ, ಇನ್ನು ಉಳಿದಿರತಕ್ಕ ಹಣಕ್ಕೆ ನಾಮಿನಲ್ ಇಂಟರೆಸ್ಟ್ ಎಷ್ಟು ? ಹಣ ಕೊಟ್ಟಿರುವವರು ಯಾರು? ಇಂಟರೆಸ್ಟ್ ಯಾವ ಪ್ರಮಾಣದಲ್ಲಿದೆ ?

ಶ್ರೀ ಎಚ್. ಸಿದ್ಧವೀರಪ್ಪ.—ಹಣ ಕೊಟ್ಟಿರುವವರು ವರ್ಲ್ಡ್ ಬ್ಯಾಂಕಿನವರು. Interest subject to correction is 1.75 per cent. Definitely, it is within 2 per cent.

Sri S. BANGARAPPA.—What is the period ?

Sri H. SIDDAVEERAPPA.—Fifteen years.

---

† Indicates that remarks or speeches have not been revised by the members concerned.